ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1191
ಉತ್ತರಿಸಬೇಕಾದ ದಿನಾಂಕ	:	22.09.2021.
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ಗೋವುಗಳು ಕಟುಕರ ಪಾಲಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ರೂಪಿಸಲಾದ ಜಿಲ್ಲೆಗೊಂದು ಗೋಶಾಲೆ ಯೋಜನೆ ನಿರೀಕ್ಷಿತ ವೇಗ ಪಡೆಯದಿರಲು ಕಾರಣಗಳೇನು?	ರಾಜ್ಯದಲ್ಲಿ ಈಗಾಗಲೇ ಜಿಲ್ಲಾ ಎಸ್.ಪಿ.ಸಿ.ಎ. ವತಿಯಿಂದ ಗೋಶಾಲೆಗಳನ್ನು ತೆರೆಯಲು ದಕ್ಷಿಣ ಕನ್ನಡ ಚಿಕ್ಕಮಗಳೂರು, ಬೆಂಗಳೂರು ನಗರ ಹಾಗೂ ಹಾಸನ ಜಿಲ್ಲೆಯಲ್ಲಿ ಪಶುಪಾಲನಾ ಇಲಾಖೆಯಿಂದ ಜಮೀನನ್ನು ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ರಾಯಚೂರು, ಬೆಂಗಳೂರು ಗ್ರಾಮಾಂತರ, ಯಾದಗಿರಿ, ವಿಜಯಪುರ, ಚಿಕ್ಕಬಳ್ಳಾಪುರ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಜಮೀನು ಗುರುತಿಸುವಿಕೆ ಪ್ರಕ್ರಿಯೆ ಮುಗಿದಿದ್ದು, ಉಳಿದ ಜಿಲ್ಲೆಯಲ್ಲಿ ಶೀಘ್ರದಲ್ಲಿಯೇ ಗೋಶಾಲೆ ಪ್ರಾರಂಭಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ವಿಜಯಪುರ ಜಿಲ್ಲೆಯಲ್ಲಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಕ್ಟೋಬರ್ 2, 2021 ರಂದು ಗೋಶಾಲೆ ಪ್ರಾರಂಭಿಸಲು ಕ್ರಮವಹಿಸಲಾಗಿದೆ.
ಆ	ಗೋವಧೆ ತಡೆ ಮತ್ತು ಗೋ ಸಂರಕ್ಷಣಾ ಕಾಯಿದೆ 2021ರಡಿ ರಾಜ್ಯದಲ್ಲಿ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ?	ಜಿಲ್ಲೆಗೆ ಒಂದು ಗೋಶಾಲೆಯನ್ನು ಎಸ್.ಪಿ.ಸಿ.ಎ. ವತಿಯಿಂದ ತೆರೆಯುವ ನಿಟ್ಟಿನಲ್ಲಿ ಜಮೀನನ್ನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಒಟ್ಟು 30 ಗೋಶಾಲೆಗಳನ್ನು ಪ್ರಾರಂಭಿಸಲಾಗುವುದು.
ಇ	ಜಿಲ್ಲೆಗೊಂದು ಗೋಶಾಲೆ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಿಡುಗಡೆಗೊಂಡ ಗೋಶಾಲೆಗಳೆಷ್ಟು; (ಜಿಲ್ಲಾವಾರು ಅನುದಾನದ ವಿವರ ಒದಗಿಸುವುದು.)	ರಾಜ್ಯದಲ್ಲಿ 30 ಜಿಲ್ಲೆಗಳಲ್ಲಿ 30 ಗೋಶಾಲೆಗಳನ್ನು ಪ್ರಾರಂಭಿಸಲು, 2021–22 ನೇ ಸಾಲಿನ ಆಯವ್ಯಯದಲ್ಲಿ ರೂ.15.00 ಕೋಟಿ ಮೀಸಲಿರಿಸಿದ್ದು, ಮೊದಲನೇ ಹಂತವಾಗಿ ಪ್ರತಿ ಜಿಲ್ಲೆಗೆ ರೂ.24.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಈ	ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ; ಬಿಡುಗಡೆಗೊಂಡ ಅನುದಾನ ಮತ್ತು ಖರ್ಚಾದ ಅನುದಾನದ ಕುರಿತ ಮಾಹಿತಿಯನ್ನು ಒದಗಿಸುವುದು.	ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 12 ಖಾಸಗಿ ಗೋಶಾಲೆಗಳಿದ್ದು 2021-22ನೇ ಸಾಲಿನಲ್ಲಿ 12 ಗೋಶಾಲೆಗಳಿಗೆ ರೂ.12,99,362/- ಗಳ ಸಹಾಯಾನುದಾನ ನೀಡಲಾಗಿದ್ದು, ವಿವರ **ಅನುಬಂಧ-1 ರಲ್ಲಿ** ನೀಡಲಾಗಿದೆ.
ಉ	ಈ ಕಾಯಿದೆಯಡಿ ಆರು ತಿಂಗಳು ದಾಟಿದ ಗಂಡು ಕರುಗಳನ್ನು ರೈತರಿಂದ ಸರ್ಕಾರ ಖರೀದಿಸಬೇಕಾಗಿದ್ದು, ಈವರೆಗೆ ಎಷ್ಟು ಕರುಗಳನ್ನು ಖರೀದಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)	ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 2020 ರಲ್ಲಿ ಈ ಕುರಿತು ಪ್ರಸ್ತಾಪಿಸಿರುವುದಿಲ್ಲ. ರೈತರಿಗೆ ಗಂಡು ಕರುಗಳನ್ನು ಸಾಕಲು ಹೊರೆಯಾದಲ್ಲಿ ಗೋಶಾಲೆಗೆ ತಂದು ಒಪ್ಪಿಸಬಹುದಾಗಿರುತ್ತದೆ.

ಪಸಂಮೀ ಇ-244 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ಸದನದಲ್ಲಿ ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1191 ಕ್ಕೆ ಅನುಬಂಧ-1

ಬೆಳಗಾವಿ ಜಿಲ್ಲೆಯ ಖಾಸಗಿ ಗೋಶಾಲೆಗಳಿಗೆ 2021-22ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದ ಸಹಾಯಾನುದಾನ ವಿವರ

ಕ್ರಸಂ	ಗೋಶಾಲೆಹೆಸರು	ಬಿಡುಗಡೆಗೊಳಿಸಿದ ಸಹಾಯಾನುದಾನ (ರೂ.ಗಳಲ್ಲಿ)
1	ಪೂಜ್ಯಶ್ರೀ ಡಾ: ಶಿವಾನಂದ ಭಾರತಿ ಮಹಾಸ್ವಾಮಿಗಳು (ಶಿವಯೋಗಿಶ್ವರ ಗೋಶಾಲೆ), ಇಂಚಲ, ಸೌದತ್ತಿ ತಾ:	1,21,072
2	ಶೀ ಸೋಮೇಶ್ವರ ಕಾಮಧೇನು ಗೋ ಸೇವಾ ಸಂಸ್ಥೆ, ಸುಕ್ಷೇತ್ರ ಪಂಚಗ್ರಾಮು, ಮುಕ್ತಿಮಠ, ಭೂತರಾಮನಹಟ್ಟಿ	1,14,586
3	ಶ್ರೀ ವಿರುಪಾಕ್ಷಲಿಂಗ ಸಮಾಧಿ ಮಠ ಟ್ರಸ್ಟ್, ನಿಪ್ಪಾಣಿ, ಚಿಕ್ಕೋಡಿ ತಾ:	1,34,044
4	ಶ್ರೀಮನ್ ನಿರಂಜನ ಜಗದ್ಗುರು ಶ್ರೀ ದುರದುಂಡೇಶ್ವರ ಮಠ ಗೋಶಾಲೆ, ಹರಗಾಪುರ, ಚಿಕ್ಕೋಡಿ ತಾ:	1,38,368
5	ದಯೋದಯ ಜೀವರಕ್ಷಾ ಸಮಿತಿ (ಗೋಶಾಲೆ) ಸದಲಗ, ಚಿಕ್ಕೋಡಿ ತಾ:	1,32,963
6	ಶ್ರೀ ಸಿದ್ದ ಪ್ರಭು ಸ್ವಾಮೀಜಿ ಶಿಕ್ಷಣ ಸಂಸ್ಥೆ, ಬೆಂಡವಾಡ, ಚಿಕ್ಕೋಡಿ ತಾ:	57,293
7	ಶ್ರೀ ಮುಪ್ಪಿನ ಕಾಡುಸಿದ್ದೇಶ್ವರ ಮಠ ಸೇವಾ ಸಮಿತಿ, ಶಿವಾಪುರ ತಾ:	69,184
8	ಪಂಚವಟಿ ಶ್ರೀ ಮಹಾಂತ ಶಿವಯೋಗೀಶ್ವರ ಕಲ್ಯಾಣ ಕೇಂದ್ರ (ಅಕ್ಕಮಹಾದೇವಿ ಗೋಶಾಲೆ) ಮುರಗೋಡ, ಸೋಗಲ, ಸೌದತ್ತಿ ತಾ:	1,54,583
9	ಶ್ರೀ ಭಗವಾನ್ ಮಹಾವೀರ್ ಜಿವ ದಯಾ ಫೌಂಡೇಶನ್ ಗೋಶಾಲೆ, ಕೋಳಿಕೊಪ್ಪ,	1,17,829
10	ಶ್ರೀ ತೋಟದಮ್ಮ (ಆದಿಶಕ್ತಿ) ಕೃಷಿ ಹಾಗೂ ಗೋಶಾಲೆ ಅಭಿವೃದ್ಧಿ ಸಂಘ, ಹುಲ್ಯಾನೂರ	75,670
11	ಶ್ರೀ ವೀರಭದ್ರ ದೇವ ಶ್ರೀ ಕಾಡದೇವರ ಮಠ, ಗೋಶಾಲ ಅಭಿವೃದ್ಧಿ ಟ್ರಸ್ಟ್, ಯಡೂರ	1,24,315
12	ಶ್ರೀ ಗುರುಗಡದೇಶ್ವರ ಲೋಕ ಕಲ್ಯಾಣ ಫೌಂಡೇಷನ್ ಸಂಸ್ಥಾನ, ಹಿರೇಮಠ ಎಂಚಂದರಗಿ ಗೋಕೈಲಾಸ ಮಂದಿರ, ಶಿಂದೋಗಿ, ಮುನವಳ್ಳಿ, ಸೌದತ್ತಿ ತಾ:	59,455
	ಒಟ್ಟು	**12,99,362**